
ಅಂದು ಭಾರತದ ರಕ್ಷಣೆಯಲ್ಲಿದ್ದ ಸಿಕ್ಕಿಂ ಪ್ರಾಂತ್ಯಕ್ಕೆ ಸಂಪರ್ಕ ಕಲ್ಪಿಸುವ ನಥು ಲಾ ಮತ್ತು ಚೊ ಲಾ ಕಣಿಗೆ ಮಾರ್ಗಗಳಲ್ಲಿ 1967ರಲ್ಲಿ ಉದ್ವಿಗ್ನತೆ ತಲೆದೋರಿತು.

ಭಾರತೀಯ ಸೇನಾಪಡೆಗಳು ಗಡಿ ಗುರುತು ಮಾಡಿ, ಮುಳ್ಳು ತಂತಿಯ ಬೇಲಿ ಹಾಕುವ ಕೆಲಸ ಶುರು ಮಾಡಿದಾಗ ಚೀನಾ ಗಸ್ತು ಸಿಬ್ಬಂದಿ ಅಡ್ಡಿಯುಂಟು ಮಾಡಿದರು. ಚೀನಾದ ಸೇನಾ ತುಕಡಿಯೊಂದು ಭಾರತೀಯ ಯೋಧರತ್ತ ಷೆಲ್ ದಾಳಿ ಆರಂಭಿಸಿತು. ಭಾರತವೂ ಪ್ರತ್ಯುತ್ತರ ನೀಡಿತು. ಈ ಸಂಘರ್ಷದಲ್ಲಿ 150ಕ್ಕೂ ಹೆಚ್ಚು ಭಾರತೀಯರು ಮತ್ತು 340 ಚೀನೀಯರು ಮೃತಪಟ್ಟರು.

ಅಕ್ಟೋಬರ್ 1967ರಲ್ಲಿ ನಡೆದ ಈ ಸಂಘರ್ಷವನ್ನು ಭಾರತ–ಚೀನಾದ ಎರಡನೇ ಯುದ್ಧ ಎಂದೇ ಹೇಳಲಾಗುತ್ತದೆ. ನಥು ಲಾದಲ್ಲಿದ್ದ ಚೀನಾದ ಬಂಕರ್ ಮತ್ತು ಗಸ್ತು ಠಾಣೆಗಳನ್ನು ಭಾರತೀಯ ಸೇನಾಪಡೆಗಳು ಧ್ವಂಸ ಮಾಡಿ, ಸ್ಪಷ್ಟ ಮೇಲುಗೈ ಸಾಧಿಸಿದವು. ಚೊ ಲಾ ಕಣಿವೆಯಲ್ಲಿ ಚೀನೀಯರನ್ನು ಸಾಕಷ್ಟು ದೂರಕ್ಕೆ ಹಿಮ್ಮೆಟ್ಟಿಸುವಲ್ಲಿಯೂ ಭಾರತೀಯ ಸೇನೆ ಯಶಸ್ವಿಯಾಯಿತು.

## ಭಾರತ ಚೀನಾ ಸಂಘರ್ಷ ಮುಂದೇನು?

- ಹಿಂದೂ ಮಹಾಸಾಗರದಲ್ಲಿ ಭಾರತೀಯ ನೌಕಾಪಡೆಯ ಗಸ್ತು ಹೆಚ್ಚಾಗಬಹುದು. ಆ ಮೂಲಕ ತೈಲೋತ್ಪನ್ನ ಹೊತ್ತು ಚೀನಾದತ್ತ ಸಾಗುವ ನೌಕೆಗಳ ಸಂಚಾರವನ್ನು ನಿರ್ಬಂಧಿಸುವ ಸಾಮರ್ಥ್ಯ ತನಗಿದೆ ಎಂಬ ಸಂದೇಶ ರವಾನೆಯಾಗಬಹುದು.
- ಭಾರತಕ್ಕೆ ಬರುವ ಚೀನಾ ನಿರ್ಮಾಣದ ವಸ್ತುಗಳಿಗೆ ನಿರ್ಬಂಧ, ಹೆಚ್ಚು ತೆರಿಗೆ ವಿಧಿಸಬಹುದು. ಭಾರತದಲ್ಲಿ ಚೀನಾದ ಹೂಡಿಕೆಗೆ ಮತ್ತಷ್ಟು ನಿರ್ಬಂಧ ಹೇರಬಹುದು.
- ಚೀನಾ ಸೇನೆ ಸದ್ಯಕ್ಕೆ ಅಲ್ಲಿಂದ ಹಿಂದೆ ಸರಿಯದು. ಇಂಥ ಮತ್ತಷ್ಟು ಸಂಘರ್ಷಗಳು ಸಂಭವಿಸಬಹುದು.
- ಭವಿಷ್ಯದಲ್ಲಿ ಭಾರತದ ರಕ್ಷಣಾ ವೆಚ್ಚ ಹೆಚ್ಚಾಗಿ, ಅಭಿವೃದ್ಧಿ ಚಟುವಟಿಕೆಗಳಿಗೆ ಹಿನ್ನಡೆಯಾಗಬಹುದು.
- ಲಡಾಖ್ ಸಂಘರ್ಷವು ಕೊರೊನಾ ವೈರಸ್ ಹುಟ್ಟಿನ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆ ಆರಂಭಿಸಿರುವ ತನಿಖೆಯಲ್ಲಿ ಭಾರತ ನಿರ್ವಹಿಸುವ ಪಾತ್ರ ಬದಲಾಗಬಹುದು.
- ವಿವಾದಿತ ಅಕ್ಸಾಯ್ ಚಿನ್ ಮರುವಶದ ವಿಚಾರದಲ್ಲಿ ಭಾರತ ಸರ್ಕಾರ ಹೆಚ್ಚು ಆಕ್ರಮಣಕಾರಿ ವರ್ತನೆ ತೋರಬಹುದು.
- ಗಡಿಯಲ್ಲಿ ಭಾರತ ಆರಂಭಿಸಿರುವ ರಸ್ತೆ ಮತ್ತು ಸೇತುವೆ ನಿರ್ಮಾಣ ಕಾಮಗಾರಿಗಳಿಗೆ ಹೊಸ ವೇಗ ಸಿಗಬಹುದು. ಈವರೆಗೆ ಗಮನ ಕೊಡದ ಪ್ರದೇಶಗಳಲ್ಲಿಯೂ ಭಾರತ ಸರ್ಕಾರ ರಸ್ತೆ ನಿರ್ಮಾಣ ಮತ್ತು ಸೇನಾ ನೆಲೆ ಸ್ಥಾಪನೆಗೆ ಗಮನ ಕೊಡಬಹುದು.
- ಮಿತ್ರ ರಾಷ್ಟ್ರವಾಗಿದ್ದ ನೇಪಾಳದ ವಿಚಾರದಲ್ಲಿ ಭಾರತದ ಧೋರಣೆ ಬದಲಾಗಬಹುದು. ಅಲ್ಲಿನ ಆಂತರಿಕ ರಾಜಕೀಯದಲ್ಲಿ ಚೀನಾದ ಪ್ರಭಾವ ತಗ್ಗಿಸಲು ಭಾರತದ ಗುಪ್ತಚರ ಇಲಾಖೆ ಯತ್ನಿಸಬಹುದು.



ಲಡಾಖ್‌ನತ್ತ ಸಾಗುತ್ತಿರುವ ಭಾರತೀಯ ಸೇನಾಪಡೆಯ ಈ ಚಿತ್ರ ಗಗನ್‌ಜಿರ್ ಎಂಬ ಪ್ರದೇಶದ್ದು.